'ಅಪ್ಪ, ನೀನು ಬರುವುದು ತಡವಾಗಬಹುದಲ್ಲವೇ?'

'ತಡವಾಗಬಹುದು. ನೀನು ಊಟ ಮಾಡಿ ಮಲಗು. ನನಗೇನೂ ಬೇಡ. ಹೊರಗಿನಿಂದ ಬೀಗಹಾಕುತ್ತೇನೆ.'

ಮುಂದುವರಿದು ಬಾಗಿಲು ಹಾಕಿ ಬೀಗ ಜಡಿಯುವ ಶಬ್ದ! ಬೆವರಿನಲ್ಲಿ ಮಿಂದು ಜಗದೀಶ ಅಡುಗೆಕೋಣೆಯ ಬಾಗಿಲು ತೆರೆದು ಹೊರಗೆ ತಲೆ ಹಾಕಿ ಶುದ್ಧಗಾಳಿಯನ್ನು ಹೊಟ್ಟೆ ತುಂಬಾ ಎಳೆದು ತುಂಬಿಸಿಕೊಂಡು ದೀರ್ಘವಾಗಿ ಒಮ್ಮೆ ನಿಟ್ಟುಸಿರುಬಿಟ್ಟ. ಕೈಯಲ್ಲಿ ಅದುರುತ್ತಿರುವ ದೀಪದೊಡನೆ, ಬಿಳಿಚಿದ ಮುಖದಲ್ಲಿ ಹೊಳೆಯುವ ಕಣ್ಣುಗಳ ಅವಳು ಬಂದಳು. ಎಳೆಯ ಮುಗುಳ್ನಗೆಯೊಂದಿಗೆ ಕೇಳಿದಳು:

'ಹೆದರಿದಿರಿ ಅಲ್ಲವೇ?'

'ಹೌದು' ಮುಂದಹಾಸದಿಂದ ನಾಚಿಕೆಯೊಡನೆ ಆತ ಸಮ್ಮತಿಸಿದ.

'ನಾನು ಸ್ವಲ್ಪ ಹೆದರಿಬಿಟ್ಟೆ. ಅಡುಗೆಕೋಣೆಯಲ್ಲಿ ಶುದ್ಧಗಾಳಿ ಬರುವುದಿಲ್ಲ.'

'ನಾನು ಬಾಗಿಲು ತೆರೆದಿರಿಸಿಕೊಂಡೇ ಅಡುಗೆ ಮಾಡುವುದು.'

ಅವರು ಪರಸ್ಪರ ನೋಡಿಕೊಂಡು ನಕ್ಕರು. ಹೊರಗೆ ಬಂದು ಆತ ಕುರ್ಚಿ ನೋಡಿದ. ಕಾಣಿಸಲಿಲ್ಲ! ಅವಳು ಹೇಳಿದಳು:

'ಅದನ್ನು ನಾನು ಆಗಲೇ ಅಲ್ಲಿಂದ ತೆಗೆದಿದ್ದೇನೆ. ಆ ಬಳಿಕವೇ ಬಾಗಿಲು ತೆರೆದುದು!'

'ನನಗೆ ಬಾಯಾರಿಕೆಯಾಗುತ್ತಿದೆ. ಬಾವಿಯಲ್ಲಿರುವ ನೀರನ್ನೆಲ್ಲಾ ಕುಡಿಯುವಷ್ಟು ಬಾಯಾರಿಕೆ!'

ಅವಳು ಒಂದು ಪಾತ್ರೆಯಲ್ಲಿ ನೀರನ್ನು ತಂದುಕೊಟ್ಟಳು. ಮಂದಹಾಸದೊಡನೆ ಅವಳು ಮತ್ತೆ ಕುರ್ಚಿ ತಂದಿಟ್ಟಳು. ಆತ ಕೇಳಿದ:

'ಇಲ್ಲಿ ಬೇರೆ ಯಾರೂ ಇಲ್ಲವೇ?'

'ಇಲ್ಲ' ಅವಳ ಮುಖ ಮ್ಲಾನವಾಯಿತು: 'ಅಮ್ಮ ತೀರಿಕೊಂಡು ಎರಡು ವರ್ಷಗಳಾದವು!'

ಉಟ್ಟ ಬಟ್ಟೆಯನ್ನು ಮಡಚಿ ಹಿಡಿದು, ಅವಳು ಹೊರಗೆ ಹೋಗಿ, ಒಂದು ಕೊಡ ನೀರಿನೊಡನೆ ಬಂದು ಜಗದೀಶನ ಮುಂದೆ ನಿಂತಳು.

'ಅದನ್ನು ತೊಳೆಯಿರಿ.'

'ನಾನು ತೊಳೆಯುತ್ತೇನೆ.'

ಮಂದಹಾಸದಿಂದ ಜಗದೀಶ ಕೊಡವನ್ನು ಕೈಗೆ ತೆಗೆದುಕೊಂಡ. ಬಟ್ಟೆಯ ಕೆಸರೆಲ್ಲವನ್ನು ತೊಳೆದು ಕಾಲು ಮುಖಗಳನ್ನು ತೊಳೆಯುತ್ತ ಕೇಳಿದ:

'ನೀವು ಕಲಿಯುತ್ತಿದ್ದೀರೇನು?'

'ನಾನು ಫಿಫ್ತ್ ವರೆಗೆ ಓದಿ ನಿಲ್ಲಿಸಿದೆ.'

'ಅದೇನು?'

'ಅಮ್ಮ ತೀರಿಕೊಂಡ ಬಳಿಕ, ಮತ್ತೆ...'

'ಮತ್ತೆ?'

'ಫೀಸು ಇತ್ಯಾದಿಗಳನ್ನು ಕೊಡುತ್ತಿದ್ದುದು ಅಮ್ಮನ ತಂಗಿ – ಮಿಸ್ಟ್ರೆಸ್; ಅವರು ಮದುವೆಯಾದ ಬಳಿಕ...'

ಅವಳು ಅಂಗಳಕ್ಕಿಳಿದು ಒಂದು ಬಾಳೆ ಎಲೆ ಕೊಯ್ದು ತಂದು ಸಂಕೋಚದಿಂದ ಮಂದಹಾಸ ಬೀರಿದಳು:

'ಊಟ ಮಾಡಿರಲಿಕ್ಕಿಲ್ಲಲ್ಲವೇ! ಸ್ವಲ್ಪ ಊಟ ಮಾಡೋಣ!'